# ಪತ್ರಿಕಾ ಪ್ರಕಟಣೆ

ವಿಜಯಪುರ
ದಿನಾಂಕ: 25.06.2021.

**1] ಎ.ಪಿ.ಎಮ್.ಸಿ ಪೊಲೀಸ ಠಾಣೆ ಗುನ್ನೆ ನಂ: 59/2021 ಕಲಂ: 78(3) ಕೆಪಿ ಆ್ಯಕ್ಟ ಹಾಗೂ 188, 269 ಐ.ಪಿ.ಸಿ**

ದಿನಾಂಕ 24.06.2021. ರಂದು 17:30 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಸಿದ್ದಣ್ಣ ಸುಭಾಷ್ ಭರಮಣ್ಣ, ಸಾ॥ ತಾಂಬಾ ತಾ॥ ಇಂಡಿ ಜಿ॥ ವಿಜಯಪೂರ, ಹಾಲಿ ಆದರ್ಶ ನಗರ ವಿಜಯಪುರ. ಈತನು ವಿಜಯಪುರ ಶಹರದ ಬಿಎಲ್‌ಡಿಇ ಇಂಜಿನಿಯರಿಂಗ್ ಕಾಲೇಜ್ ಮುಂದೆ ರಸ್ತೆಯ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಮಾಸ್ಕನ್ನು ಹಾಕಿಕೊಳ್ಳದೆ ಹಾಗೂ ಯಾವುದೇ ಸಾಮಾಜಿಕ ಅಂತರ ಕಾಪಾಡಿಕೊಳ್ಳದೆ ಸದರಿ ಕೋರೋನ ವೈರಸ್ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ ಅದರ ಬಗ್ಗೆ ಮುಂಜಾಗ್ರತೆ ವಹಿಸಬೇಕು ಅಂತಾ ಮಾನ್ಯ ಸರ್ಕಾರದಿಂದ ಲಾಕ್‌ಡೌನ್ ಆದೇಶ ಇದ್ದರೂ ಕೂಡಾ ತಿಳಿದು ತಿಳಿದು ಮಾನ್ಯ ಸರ್ಕಾರದ ಅದೇಶ ಉಲ್ಲಂಘನೆ ಮಾಡಿ ಸಾರ್ವಜನಿಕರಿಂದ 1 ರೂಗೆ 80 ರೂ ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಕಲ್ಯಾಣ ಮಟಕಾ ಅಂಬುವ ಓಸಿ ಜೂಜಾಟದಲ್ಲಿ ತೊಡಗಿದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: ರೋಖ ಹಣ: 620/– ರೂಗಳು ಈ ಬಗ್ಗೆ ಸ:ತ: ಸೊಮೇಶ ಗೆಜ್ಜಿ ಪಿ.ಎಸ್.ಐ (ಕಾ&ಸು) ಎ.ಪಿ.ಎಂ.ಸಿ ಪಿ.ಎಸ್ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 24.06.2021 ರಂದು ಎ.ಪಿ.ಎಮ್.ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಆಲಮೇಲ ಪೊಲೀಸ ಠಾಣೆ ಗುನ್ನಾ. ನಂ: 73/2021 ಕಲಂ: 188, 269 ಐಪಿಸಿ & 15 (ಎ), 32 (3) ಕೆ.ಇ ಆ್ಯಕ್ಟ.**

ದಿನಾಂಕ 24.06.2021 ರಂದು 12.55 ಗಂಟೆ ಸುಮಾರಿಗೆ ಇದರಲ್ಲಿ ಕೇದಾರ ಸುಭಾಷ ಸುಂಬಡ ಸಾ: ದೇವರನಾವದಗಿ ತಾ: ಸಿಂದಗಿ ಜಿ: ವಿಜಯಪುರ. ಈತನು ತನಗೆ ಸರಕಾರದಿಂದ ಯಾವುದೇ ಪರವಾನಿಗೆ ಇಲ್ಲದೆ ಅನಧಿಕೃತವಾಗಿ ದೇವರನಾವದಗಿ ಗ್ರಾಮದ ಬಸ್ ಸ್ಟ್ಯಾಂಡ ಹತ್ತಿರ ಇರುವ ತನ್ನ ಬಾಬತ ಕಿರಾಣಿ ಅಂಗಡಿಯ ಮುಂದೆ ಆರೋಪಿತನು ಕೋರೋನಾ ಸಾಂಕ್ರಾಮಿಕ ರೋಗವು (ಕೋವಿಡ್–19) ವ್ಯಾಪಕವಾಗಿ ಹರಡುತ್ತಿದ್ದರಿಂದ ಮಾನ್ಯ ಜಿಲ್ಲಾ ದಂಢಾಧಿಕಾರಿಗಳು ಸಾರ್ವಜನಿಕರಿಗೆ ಗುಂಪಾಗಿ ಕೂಡುವುದು ಸೇರುವುದು ಮತ್ತು ಸಾಮಾಜೀಕ ಅಂತರ ಕಾಯ್ದುಕೊಳ್ಳವುದು ಗುಂಪಾಗಿ ಜನ ಸೇರದಂತೆ ಮುನ್ನೆಚೆರಿಕೆ ಕ್ರಮವಾಗಿ ನಿಷೇದಾಜ್ಞೆ ಮಾಡಿದ್ದು, ಸದರ ಆಜ್ಞೆಯನ್ನು ಧಿಕ್ಕರಿಸಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳದೆ ಜನರನ್ನು ಗುಂಪಾಗಿ ಸೇರಿಸಿಕೊಂಡು ಸರಕಾರ ವಿಧಿಸಿರುವ ನಿಯಮಾವಳಿಗಳನ್ನು ಉಲ್ಲಂಘಿಸಿ ಸಾಂಕ್ರಾಮಿಕ ರೋಗವು ಹರಡದಂತೆ ಕೈಕೊಂಡ ಕ್ರಮಗಳ ವಿರುದ್ದವಾಗಿ ಸಾರ್ವಜನಿಕರಿಗೆ ಸೊಂಕು ಹರಡುವ ಸಂಭವ ಇದೆ ಅಂತಾ ಗೊತ್ತಿದ್ದರು ಕೂಡಾ ಉದ್ದೇಶ ಪೂರ್ವಕವಾಗಿ ಸದರಿ ಸ್ಥಳದಲ್ಲಿ ಸರಕಾರದಿಂದಾಗಲಿ, ಅಥವಾ ಸಂಬಂಧಪಟ್ಟ ಇಲಾಖೆಯಿಂದಾಗಲಿ ಪರವಾನಿಗೆ ಪಡಯದೇ ಅನಧಿಕೃತವಾಗಿ ಸಾರ್ವಜನಿಕರಿಗೆ ಮದ್ಯ ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟಾಗ ಸಿಕ್ಕಿದ್ದು ಇರುತ್ತದೆ. ಅಂತಾ ವಗೈರೆ ಫಿರ್ಯಾದಿಯಲ್ಲಿ ನಮೂದು ಇರುತ್ತದೆ. ಈ ಬಗ್ಗೆ ಸ:ತ: ಸುರೇಶ ಆರ್.ಗಡ್ಡಿ ಪಿ.ಎಸ್.ಐ ಆಲಮೇಲ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 24.06,2021 ರಂದು ಆಲಮೇಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ನಿಡಗುಂದಿ ಪೊಲೀಸ ಠಾಣೆ ಗುನ್ನಾ. ನಂ: 75/2021 ಕಲಂ: 279, 337, 338 ಐಪಿಸಿ**

ದಿನಾಂಕ 23.06.2021 ರಂದು 21:15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ದುಂಡಪ್ಪ ತಂ ದುಗ್ಗಪ್ಪ ಕಾಸರ್ ಸಾ॥ ಆಲಮಟ್ಟಿ ತಾ: ನಿಡಗುಂದಿ ಒಮ್ನಿ ಕಾರ್ ನಂ: ಕೆಎ–20 ಎನ್–7445 ನೇದ್ದರ ಚಾಲಕ. ಇವನು ತಾನು ನಡೆಯಿಸುತ್ತಿದ್ದ ಒಮ್ನಿ ಕಾರ್ ನೇದ್ದನ್ನು ವಿಜಯಪುರ ಕಡೆಯಿಂದ ಹುನಗುಂದ ಕಡೆಗೆ ಹೋಗುವ ಎನ್.ಎಚ್–50 ರಸ್ತೆಯ ಮೇಲೆ ಗೋನಾಳ ಕ್ರಾಸ್ ದಾಟಿ ಇಂಡಿಯನ್ ಗ್ಯಾಸ್ ಗೋಡಾವನ್ ಹತ್ತಿರ ಬಹಳ ಜೋರಾಗಿ, ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಯಿಸಿಕೊಂಡು ಬಂದು ಮುಂದೆ ತನ್ನ ಸೈಡಿನಲ್ಲಿ ನಿಡಗುಂದಿ ಕಡೆಗೆ ಹೊರಟ ಮೋಟಾರ್ ಸೈಕಲ್ ನಂ: ಕೆಎ–28 ಇಎನ್–6770 ನೇದ್ದಕ್ಕೆ ಹಿಂದಿನ ಬಾಜೂ ಡಿಕ್ಕಿ ಹಾಯಿಸಿ, ಓಮ್ನಿ ಕಾರ ಪಲ್ಟಿ ಮಾಡಿ ಕೆಡವಿ ಅಪಘಾತ ಮಾಡಿ ಕಾರಿನಲ್ಲಿ ಕುಳಿತು ಹೊರಟ ಪಿರ್ಯಾದಿಗೆ ಹಾಗೂ ಇನ್ನು ಮೂರು ಜನರಿಗೆ ಮತ್ತು ಮೋಟಾರ ಸೈಕಲ ಚಾಲಕ ಬಸವರಾಜ ಪಾಟೀಲ ಇವನಿಗೆ ಸಾದಾ ವ ಬಾರೀ ಗಾಯಪೆಟ್ಟು ಪಡಿಸಿದ ಅಪರಾಧ. ಈ ಬಗ್ಗೆ ಭೀಮರಾವ್ ದುರ್ಗನಾಥ ಕಾಸರ್ ಸಾ: ನಿಡಗುಂದಿ ಕಾಲೇಜ್ ರೋಡ್ ವ್ಯಾಪಾರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 24.06,2021 ರಂದು ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.